ದಿನಾಂಕ 24-02-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಬಿ.ವಿ.ಕೆ., ವಕೀಲರಿಂದಃ-

6. ನಾನು ಹಾಜರುಪಡಿಸಿರುವ ಪಹಣಿಗಳು ದಾವಾ ಐಟಂ ನಂ.1, 2, 4 ರಿಂದ 6 ಸ್ವತ್ತುಗಳ ಖಾತೆ ವಿಭಾಗದಂತೆ ಮಾಡಿಕೊಂಡಿರುವ ಖಾತೆ ಎಂದರೆ ಸರಿ. ಅವರು ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡರು ಎಂದು ಗೊತ್ತಿಲ್ಲ. ವಿಭಾಗ ಆದದ್ದು ನಾನು ಜನಿಸಿದ ನಂತರ. ವಿಭಾಗ ಆಗುವ ಮುಂಚೆ ಖಾತೆ ಕರಿಯಪ್ಪನ ಹೆಸರಿನಲ್ಲಿ ಇದ್ದವು. ವಿಭಾಗವನ್ನು ನಾನು ಜನಿಸಿದ ಎಷ್ಟು ವರ್ಷಗಳ ನಂತರ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ನನ್ನ ತಂದೆಯ ಭಾಗಕ್ಕೆ ಬಂದ ಸ್ವತ್ತುಗಳಿಗೆ ಮಾತ್ರ ಸಂಬಂಧಪಟ್ಟಂತೆ ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ಸ್ವತ್ತುಗಳ ಖಾತೆ ನನ್ನ ತಾಯಿಯ ಹೆಸರಿಗೆ ಆಗಿವೆ. ಬರವಣಿಗೆ ಮುಖಾಂತರ ವಿಭಾಗ ಆಗಿಲ್ಲ. ಸಾಕ್ಷಿಯು ಸ್ವಇಚ್ಛೆಯಿಂದ ಇಂತ ಇಂತಹ ಸರ್ವೇ ನಂಬರ್ ಗಳೆಂದು ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

7. ನಿಡಿ-6ರಂತೆ ಹನುಮಂತಯ್ಯನ ಮಗ ಹೊಂಬಯ್ಯರವರು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ ಮೇರೆಗೆ ದಿನಾಂಕ 19.03.1991ರಂದು ಮಂಜೂರು ಮಾಡಿರುವಂತೆ ಖಾತೆ ಆಗಿದೆ ಎಂದರೆ ಸಾಕ್ಷಿಯು ನನ್ನ ತಂದೆಯವರೇ ಅವರು ಹಿರಿಯ ಮಗ ಎಂದು ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ಆಸ್ತಿಯ ಮಂಜೂರಾತಿಗಾಗಿ ನನ್ನ ತಂದೆ ಅರ್ಜಿ ಸಲ್ಲಿಸಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಹೊಂಬಯ್ಯರವರು ಮನೆಯಿಂದ ಹೊರಗೆ ಹೋದ ನಂತರ ಸ್ವತ್ತಿನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದು ಎಂದರೆ ಸರಿಯಲ್ಲ. ಸರ್ವೇ ನಂ.26ಕ್ಕೆ ಸಂಬಂಧಪಟ್ಟಂತೆ ಕಂದಾಯವನ್ನು ನೀವು ಕಟ್ಟಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯು ಕಂದಾಯ

ಪಾವತಿಸಿದ್ದರು ಎಂದು ತೋರಿಸಲು ರಶೀದಿ ಹಾಜರುಪಡಿಸಲು ಆಗುವುದಿಲ್ಲ. 1996ಕ್ಕೂ ಮುಂಚೆ ಸರ್ವೆ ನಂ.26ನ್ನು ಉಳುಮೆ ಮಾಡುತ್ತಿದ್ದೆವು ಎಂದು ತೋರಿಸಲು ದಾಖಲೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ನಿಡಿ-6 ದಾಖಲೆ ಮಾತ್ರ ಎಂದು ನುಡಿಯುತ್ತಾರೆ.

8. ನಿಮ್ಮ ಅಣ್ಣ ಮನೆಯಿಂದ ಹೊರಗೆ ಹೋಗಲು ಏನು ಕಾರಣ ಎಂದರೆ ಸಾಕ್ಷಿಯು ಮನೆಯಲ್ಲಿ ಸರಿ ಬೀಳದ ಕಾರಣ ಹಾಗೂ ನನ್ನ ತಂದೆ ಮನೆ ಕಟ್ಟಿಸಿಕೊಟ್ಟರು ಅದಕ್ಕೆ ಹೋದರು ಎಂದು ನುಡಿಯುತ್ತಾರೆ. ಸರ್ವೆ ನಂ.26ರಲ್ಲಿ ನಮಗೆ 39 ಗುಂಟೆ ಮಂಜೂರಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಯಾರಿಗೂ ಮಂಜೂರು ಮಾಡಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.26ರಲ್ಲಿ ನೀವು ಯಾರೂ ವ್ಯವಸಾಯ ಮಾಡುತ್ತಿಲ್ಲವಾ ಎಂದರೆ ಸಾಕ್ಷಿಯು ಬೆಳೆದುಕೊಂಡು ತಿನ್ನುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾವು ಉಳುಮೆ ಮಾಡುತ್ತಿರುವ ಸರ್ವೆ ನಂ.26ರ ಜಮೀನಿಗೂ, ಹೊಂಬಯ್ಯನಿಗೆ ಮಂಜೂರಾಗಿರುವ 3 ಎಕರೆಗೂ ಸಂಬಂಧ ಇಲ್ಲ ಎಂದರೆ ಸರಿ. ಸರ್ವೆ ನಂ.26ರಲ್ಲಿ ಉಳುಮೆ ಮಾಡುತ್ತಿರುವವರು ನಾವೊಬ್ಬರೇ. ನಾವು ಉಳುಮೆ ಮಾಡುತ್ತಿರುವ ಸರ್ವೆ ನಂ.26ರಲ್ಲಿ 39 ಗುಂಟೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಿಡಿ-1ರ ಷೆಡ್ಯೂಲ್‌ನಲ್ಲಿ ಸ್ವಯಾರ್ಜಿತ ಸ್ವತ್ತು ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ಅಲ್ಲಿ ಸುಳ್ಳು ಹೇಳಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.26/ಪಿ3 ರ 3 ಎಕರೆ ಹೊಂಬಯ್ಯನಿಗೆ ಸೇರಿದ ಆಸ್ತಿ ಅಲ್ಲ, ಒಟ್ಟು ಕುಟುಂಬದ ಆಸ್ತಿ ಎಂದು ನೀವು ಪ್ರಶ್ನೆ ಮಾಡಿ ಕೇಸು ಹಾಕಿಲ್ಲ ಎಂದರೆ ಸಾಕ್ಷಿಯು ನಾವು ಹಾಕಿಲ್ಲ, ಅವರೇ ಹಾಕಿದ್ದಾರೆ ಎಂದು ನುಡಿಯುತ್ತಾರೆ.

9. ಸರ್ವೆ ನಂ.26 ಪೋಡಿಯಾಗಿ ಸರ್ವೆ ನಂ.89 ಆಗಿದೆ ಎಂದರೆ ಸಾಕ್ಷಿಯು ಖರೀದಿ ಮಾಡಿರುವವರು ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.26 ನಿಡಿ-13 ಕ್ರಯಪತ್ರ ಆಗುವ ಮುಂಚೆ ಪೋಡಿಯಾಗಿತ್ತು,

ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಪೋಡಿಯಾದ ನಂತರ 3 ಎಕರೆ ಇದ್ದದ್ದು 4 ಎಕರೆ 20 ಗುಂಟೆ ಆಗಿದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 1 ಎಕರೆ 20 ಗುಂಟೆ ನಮ್ಮ ಒಟ್ಟು ಕುಟುಂಬದ ಸ್ವತ್ತು ಖಾತೆ ಮಾಡಬಾರದೆಂದು ನಿಮ್ಮ ಅಣ್ಣನ ಪತ್ನಿ ತಕರಾರು ಕೊಟ್ಟಿದ್ದರು ಎಂದರೆ ಸಾಕ್ಷಿಯು ಮೊದಲು ನನ್ನ ಅಣ್ಣ ಇದ್ದಾಗಲೇ 3 ಎಕರೆಗೆ ತಕರಾರು ಕೊಟ್ಟಿದ್ದರು, ನನ್ನ ಅತ್ತಿಗೆ 1 ಎಕರೆ 20 ಗುಂಟೆ ತಕರಾರು ಕೊಟ್ಟಿದ್ದರು ಎಂದು ನುಡಿಯುತ್ತಾರೆ. 1 ಎಕರೆ 20 ಗುಂಟೆ ನನ್ನ ಅತ್ತಿಗೆಯ ಹೆಸರಿಗೆ ಆಗಿತ್ತು ಎಂದು ತೋರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಜಮೀನು ಖರೀದಿ ಮಾಡಿರುವವರು ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

10. ದಾವಾ ಐಟಂ ನಂ.3ನ್ನು ಹೊರತುಪಡಿಸಿ ಉಳಿದ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿಯು ದಾವಾ ಐಟಂ ನಂ.1 ನನ್ನ ತಂದೆ ಖರೀದಿ ಮಾಡಿರುವ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ನಮ್ಮ ತಾತನಿಂದ ಬಂದ ಆಸ್ತಿ. ದಾವಾ ಐಟಂ ನಂ.5 ಮತ್ತು 6 ಸಹ ನಮ್ಮ ತಾತನಿಂದ ಬಂದ ಆಸ್ತಿಗಳು. ಸರ್ವೇ ನಂ.26 ಒಟ್ಟು ಕುಟುಂಬದ ಆಸ್ತಿ ಅದನ್ನು ನಿನ್ನ ಭಾಗಕ್ಕೆ ತೆಗೆದುಕೊಂಡು ಹೋಗು ಎಂದು ನನ್ನ ಅಣ್ಣನಿಗೆ ಕೊಟ್ಟು, ದಾಖಲೆ ಮಾಡಿಕೊಂಡಿಲ್ಲ. ನೀವು, ನಿಮ್ಮ ಅಣ್ಣ ವಿಭಾಗ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದನ್ನು ನೀವು ಉಳುಮೆ ಮಾಡಿಕೋ, ಇದನ್ನು ನಾನು ಮಾಡಿಕೊಳ್ಳುತ್ತೇನೆ ಎಂದು ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ಸರ್ವೇ ನಂ.26ರಲ್ಲಿ ನಮಗೂ ಭಾಗ ಬರಬೇಕೆಂದು ನೀವು ಈ ದಾವೆಯಲ್ಲಿ ಕೇಳಿದ್ದೀರಾ ಎಂದರೆ ಸಾಕ್ಷಿಯು ಅದನ್ನು ನಮ್ಮ ಅಣ್ಣನಿಗೆ ಕೊಟ್ಟಿದ್ದೇವೆ ನಾನೇಗೆ ಭಾಗ ಕೇಳಲಿ ಎಂದು ನುಡಿಯುತ್ತಾರೆ. ಸರ್ವೇ ನಂ.26ರಲ್ಲಿ 3 ಎಕರೆಯಲ್ಲಿ ನಿಮ್ಮ ಅಣ್ಣನವರೇ ಉಳುಮೆ ಮಾಡುತ್ತಿದ್ದು, ಅರ್ಜಿ ಸಲ್ಲಿಸಿದ್ದರಿಂದ ಅವರ ಹೆಸರಿಗೆ ಮಂಜೂರು ಮಾಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ತಂದೆಯೇ ಮಾಡಿಸಿದ್ದು ಎಂದು ನುಡಿಯುತ್ತಾರೆ. ಸದರಿ ಆಸ್ತಿ ನಿಮ್ಮ ಅಣ್ಣನ ಸ್ವಯಾರ್ಜಿತ ಆಸ್ತಿ, ನಿಮಗೆ ಯಾರಿಗೂ ಹಕ್ಕಿಲ್ಲ ಎಂದರೆ ಸಾಕ್ಷಿಯು

ನಮ್ಮ ಅಣ್ಣನಿಗೆ ಅದನ್ನು ನಾವು ಕೊಟ್ಟಿರುವುದರಿಂದ ನಾವು ಅದರಲ್ಲಿ ಭಾಗ ಕೇಳಿಲ್ಲ ಎಂದು ನುಡಿಯುತ್ತಾರೆ.

11. ಸರ್ವೆ ನಂ.26ರ ಆಸ್ತಿಯನ್ನು ಮಾರಾಟ ಮಾಡಿದ ಹಣದಿಂದ ನಿಡಿ-3 ರಿಂದ ನಿಡಿ-5ರಲ್ಲಿ ನಮೂದಿಸಿರುವ ಸೈಟುಗಳನ್ನು ಖರೀದಿ ಮಾಡಿದ್ದು ಎಂದರೆ ಸರಿ. ಸರ್ವೆ ನಂ.26ಕ್ಕೆ ಸಂಬಂಧಪಟ್ಟ ದಾಖಲೆಗಳು ನನ್ನ ಹೆಸರಿನಲ್ಲಾಗಲೀ, ನನ್ನ ತಂದೆಯ ಹೆಸರಿನಲ್ಲಾಗಲೀ ಇಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.